

# ಪ್ರಿಯಾಂಕಾ ಖುಷಿ

ಮದುವೆ, ಹನಿಮೂನ್ ಎಲ್ಲ ಮುಗಿದಿದೆ. ಇನ್ನೀಗ ಪ್ರಿಯಾಂಕಾ ಚೋಪ್ರಾ ಅಭಿನಯದ ಹೊಸ ಹಿಂದಿ ಚಿತ್ರ 'ದಿ ಸ್ಕೈ ಈಸ್ ಪಿಂಕ್' ಬಿಡುಗಡೆಯಾಗುವುದಷ್ಟೇ ಬಾಕಿ. ಅಕ್ಟೋಬರ್ 11ರಂದು ಹೊಸ ಚಿತ್ರ ಬಿಡುಗಡೆ ಆಗಲಿದೆ ಎಂದು ನಿರ್ಮಾಪಕರು ಪ್ರಕಟಿಸಿದ್ದಾರೆ. ಪ್ರಿಯಾಂಕಾ ಭಾರತೀಯ ಬೆಳ್ಳಿತೆರೆಯಲ್ಲಿ ಮುಖ ತೋರಿಸಿ ಮೂರು ವರ್ಷಗಳೇ ಕಳೆದಿವೆ! 2016ರಲ್ಲಿ ಪ್ರಕಾಶ್ ಝಾ ನಿರ್ದೇಶನದ 'ಜೈ ಗಂಗಾಜಲ್' ಆಕೆ ಅಭಿನಯಿಸಿದ ಕೊನೆಯ ಚಿತ್ರ.

ಈ ಮಧ್ಯೆ ಪ್ರಿಯಾಂಕಾ ಇನ್ನೂ ಎರಡು ಹೊಸ ಸಿನಿಮಾಗಳಿಗೆ ಸಹಿ ಹಾಕಿರುವ ಸುದ್ದಿ ಬಂದಿದೆ. ಖ್ಯಾತ ಇಂಗ್ಲಿಷ್ ಕಾದಂಬರಿಕಾರ ಅರವಿಂದ ಅಡಿಗ ಪ್ರಕಟಿಸಿದ 'ದಿ ವೈಟ್ ಟೈಗರ್' ಕಾದಂಬರಿ ಆಧಾರಿತ ಹೊಸ ಹಿಂದಿ ಸಿನಿಮಾದಲ್ಲಿ ಪ್ರಿಯಾಂಕಾಳೇ ಹೀರೋಯಿನ್. ಈ ಕಾದಂಬರಿ 'ಬೂಕರ್' ಪ್ರಶಸ್ತಿ ಪಡೆದು ವಿಶ್ವದಾದ್ಯಂತ ಜನಪ್ರಿಯವಾಗಿತ್ತು. 'ವಿ ಕ್ಯಾನ್ ಬಿ ಹೀರೋಸ್' ಎನ್ನುವುದು ಇನ್ನೊಂದು ಚಿತ್ರ. 'ಸ್ಪೈ ಕಿಡ್ಸ್' ಖ್ಯಾತಿಯ ರಾಬರ್ಟ್ ರೊಡ್ರಿಗಸ್ ನಿರ್ದೇಶನದ ಈ ಚಿತ್ರದಲ್ಲೂ ಪ್ರಿಯಾಂಕಾ ನಾಯಕಿ. 'ಈ ಎರಡು ಚಿತ್ರಗಳೊಂದಿಗೆ ಈ ವರ್ಷವನ್ನು ಮುಗಿಸುವುದು ನಿಜಕ್ಕೂ ಖುಷಿ ಅನ್ನಿಸುತ್ತಿದೆ' ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ಬರೆದುಕೊಂಡಿದ್ದಾಳೆ ಪ್ರಿಯಾಂಕಾ.

'ದಿ ಸ್ಕೈ ಈಸ್ ಪಿಂಕ್' ಸತ್ಯ ಘಟನೆಯೊಂದನ್ನು ಆಧರಿಸಿದ ಚಿತ್ರವಾಗಿದ್ದು, ಮುಂಬೈ, ದೆಹಲಿ, ಅಂಡಮಾನ್‌ಗಳಲ್ಲಿ ಶೂಟಿಂಗ್ ಮಾಡಲಾಗಿದೆ. ಫರ್ಹಾನ್ ಅಖ್ತರ್ ನಾಯಕ. ಈ ಹಿಂದೆ ಫರ್ಹಾನ್ ಮತ್ತು ಪ್ರಿಯಾಂಕಾ 2015ರಲ್ಲಿ ಜೋಡಿಯಾಗಿ 'ದಿಲ್ ದಢಕ್‌ನೆ ದೋ' ಚಿತ್ರದಲ್ಲಿ ನಟಿಸಿದ್ದರು. '... ಪಿಂಕ್'ನಲ್ಲಿ 'ದಂಗಲ್' ಖ್ಯಾತಿಯ ಜೈರಾ ವಾಸಿಂ ಕೂಡಾ ನಟಿಸಿದ್ದು, ಬಹುತೇಕ ಇದು ಆಕೆಯ ಕೊನೆಯ ಸಿನಿಮಾ. ಚಿತ್ರರಂಗದಿಂದ ನಿವೃತ್ತಿ ಹೊಂದಿರುವುದಾಗಿ ಆಕೆ ಈಗಾಗಲೇ ಘೋಷಿಸಿಯಾಗಿದೆ. ■

# ಇಲಿಯಾನಾಳ ದುಃಖ

'ಸ್ವರ್ಗದ ನಗು; ಆಕೆಯ ಕಣ್ಣಲ್ಲಿ ಬೆಂಕಿ!'

—ಇದು ಇಲಿಯಾನ ಡಿಕ್ರೂಸ್ ತನ್ನ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಇತ್ತೀಚೆಗೆ ಬರೆದುಕೊಂಡ ವಾಕ್ಯ. ಆ್ಯಂಡ್ರೂ ನೀಬೋನ್ ಜೊತೆಗೆ ಸಂಬಂಧವನ್ನು ಕಡಿದುಕೊಂಡ ಬಳಿಕ ಇಲಿಯಾನಾ ಸಾಕಷ್ಟು ಕ್ರುದ್ಧಳಾದಂತಿದೆ. ಆಕೆ ಮತ್ತು ಆತ ಇಬ್ಬರೂ ಇನ್‌ಸ್ಟಾಗ್ರಾಮ್‌ನಲ್ಲಿ ಏಕಕಾಲಕ್ಕೆ ಪರಸ್ಪರರನ್ನು 'ಅನ್‌ಫ್ರೆಂಡ್' ಮಾಡಿಕೊಂಡಿದ್ದಾರೆ. ಜೊತೆಗೆ ಇಬ್ಬರೂ ತಾವು ಜೊತೆಗಿದ್ದ, ತಿರುಗಾಡಿದ ಎಲ್ಲ ಫೋಟೋಗಳನ್ನೂ ಡಿಲೀಟ್ ಮಾಡಿದ್ದಾರೆ. ಪ್ರೇಮವೈಫಲ್ಯದ ಈ ಹತಾಶೆಯನ್ನು ಹೇಗೆ ಗೆಲ್ಲಬೇಕೆಂಬುದು ಇಲಿಯಾನಾಗೆ ಗೊತ್ತಾಗುತ್ತಿಲ್ಲವಂತೆ. ಅದು ಆಕೆಯ ಇನ್‌ಸ್ಟಾಗ್ರಾಮ್ ಸ್ಟೇಟಸ್‌ನಲ್ಲೂ ಸ್ಪಷ್ಟವಾಗಿ ಕಾಣಿಸುತ್ತಿದೆ.

'ಜೀವನದಲ್ಲಿ ನೀವು ಸ್ನೇಹಿತರನ್ನು, ಕುಟುಂಬದ ಸದಸ್ಯರನ್ನು, ಜೊತೆಗಾರರನ್ನು ಕಳೆದುಕೊಳ್ಳಬಹುದು. ಯಾರೇ ನಿಮ್ಮ ಜೀವನದಿಂದ ಹೊರನಡೆದರೂ ನಿಮ್ಮನ್ನು ನೀವು ಕಳೆದುಕೊಳ್ಳಬೇಡಿ. ನಿಮ್ಮ ಸುತ್ತ ಇರುವವರು ನಿಮ್ಮ ಪ್ರೀತಿಸದಾದಾಗ ನಿಮ್ಮನ್ನು ನೀವು ಪ್ರೀತಿಸುವುದು ಹೇಗೆ ಎನ್ನುವುದೇ ಮಹತ್ವದ ಪ್ರಶ್ನೆ. ನಿಮಗೆ ಯಾರೂ ಇಲ್ಲ ಎಂದು ಗೊತ್ತಾದಾಗ ನಿಮ್ಮ ಸಲುವಾಗಿ ನೀವಿರಿ' ಎಂದು ಇಲಿಯಾನಾ ತನ್ನ ಸ್ಟೇಟಸ್‌ನಲ್ಲಿ ಬರೆದುಕೊಂಡಿದ್ದಾಳೆ.

ಬಾಲಿವುಡ್‌ನಲ್ಲಿ ಸದ್ಯಕ್ಕೆ ಇಲಿಯಾನಾ ಕೈಯಲ್ಲಿ ಹೆಚ್ಚಿನ ಸಿನಿಮಾಗಳೇನೂ ಇಲ್ಲ. ಜಾನ್ ಅಬ್ರಹಾಂ ಜೊತೆಗೆ ಹೀರೊಯಿನ್ ಆಗಿ ನಟಿಸುತ್ತಿರುವ 'ಪಾಗಲ್‌ಪಂತಿ' ಮೊದಲ ಹಂತದ ಶೂಟಿಂಗ್ ಮುಗಿಸಿದೆ. ಈ ಚಿತ್ರದಲ್ಲಿ ಅನಿಲ್ ಕಪೂರ್, ಅರ್ಶದ್ ವಾರ್ಸಿ ಕೂಡಾ ಇದ್ದು ಇದೊಂದು 'ಸಖತ್ ಕಾಮಿಡಿ' ಸಿನಿಮಾ ಎನ್ನಲಾಗಿದೆ. ಕೂಡಿಕೆವೈಫಲ್ಯದ ಬಳಿಕ ಸಿನಿಮಾಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ಇಲಿಯಾನಾ ನಿರ್ಧರಿಸಿದ್ದಾಳಂತೆ.



■ ಹನಿ